ಕುಳಿತುಕೊಂಡರು. ಅವರದು ನೀಳವಾದ ಕೂದಲು ಮತ್ತು ಗಡ್ಡ, ಉಜ್ವಲವಾದ ಗೌರವರ್ಣದ ಮುಖ. ಬಿಳಿ ಬಣ್ಣದ ದಪ್ಪನಾದ ಹೊದಿಕೆಯಿಂದ ಮೈಮುಚ್ಚಿಕೊಂಡಿದ್ದಾರೆ. ಅವರು ಸಂಕೀರ್ತನೆ ಮುಗಿಯುತ್ತಿದ್ದಂತೆಯೇ ಎದ್ದು ಹೊರಟೇಬಿಟ್ಟರು. ನನ್ನ ಗಮನವೆಲ್ಲ ಅವರತ್ತಲೇ ಇತ್ತು. ನಂತರ ಸ್ವಾಮಿ ಬ್ರಹ್ಮಾನಂದಜಿ ಅವರು ಹೇಳಿದರು: 'ಸಾಕ್ಷಾತ್ ಹನುಮಂತನೇ ದಯಮಾಡಿಸಿದ್ದನು. ಸಂಕೀರ್ತನೆಯನ್ನು ಕುಳಿತುಕೇಳುತ್ತಿದ್ದ ಗೌರವರ್ಣದ ಆ ವ್ಯಕ್ತಿಯೇ ಹನುಮಂತ.' ಇದನ್ನು ಕೇಳಿದೊಡನೆಯೇ ಅಲ್ಲಿದ್ದವರೆಲ್ಲರೂ ಆ ಹನುಮಂತನನ್ನು ಹುಡುಕಿಕೊಂಡು ಅತ್ತಿತ್ತ ಓಡಿದರು. ಆದರೆ ಅಲ್ಲಿ ಅವರಿಗೆ ಕಂಡದ್ದು, ಎದುರಿಗಿನ ಒಂದು ಆಲದ ಮರದ ಮೇಲೆ ಕುಳಿತಿದ್ದ ನಾಲ್ಕಾರು ಕಪಿಗಳಷ್ಟೇ!"

ಈ ಘಟನೆ ನಡೆದಿದ್ದು ಫಾಲ್ಗುಣ ಶುದ್ಧ ಏಕಾದಶಿಯಂದು. ಅಂದು ಪ್ರಥಮಬಾರಿಗೆ ಸಂಕಟಮೋಚನ ಮಂದಿರದಲ್ಲಿ ರಾಮನಾಮ ಸಂಕೀರ್ತನೆ ಈ ಪ್ರಕಾರವಾಗಿ ನಡೆಯಿತು. ಸ್ವಾಮಿ ಬ್ರಹ್ಮಾನಂದಜಿ ಮಹಾರಾಜರ ಇಷ್ಟಾನುಸಾರ, ಪ್ರತಿ ವರ್ಷ ಆ ದಿನದಂದು, ಅಲ್ಲಿ 'ರಾಮನಾಮ ಸಂಕೀರ್ತನೆ'ಯನ್ನು ಆಯೋಜಿಸುವ ಪದ್ಧತಿ ಬೆಳೆದುಬಂದಿದೆ.

ರಾಮನಾಮ ಸಂಕೀರ್ತನೆಯ ಸಮಯದಲ್ಲಿ ಹನುಮಂತನ ಆಗಮನದ ಹಿನ್ನೆಲೆ ಏನು ಎನ್ನುವುದನ್ನು ನಾವು ಸ್ವಲ್ಪ ನೋಡಬೇಕು. ವಾಲ್ಮೀಕಿ ರಾಮಾಯಣದ ಉತ್ತರ ಕಾಂಡದಲ್ಲಿ (ಸರ್ಗ ೧೦೮: ೩೪) ಭಗವಾನ್ ಶ್ರೀರಾಮಚಂದ್ರನ ಲೀಲಾವಸಾನ ಹಾಗೂ ವೈಕುಂಠಗಮನದ ವಿವರಣೆ ಬರುತ್ತದೆ. ಆ ಸಮಯದಲ್ಲಿ ರಾಮಚಂದ್ರನು ಹನುಮಂತನಿಗೆ ಇತ್ತ ಆದೇಶ ಇದು:

**ಮತ್ಕಥಾಃ ಪ್ರಚರಿಷ್ಯಂತಿ ಯಾವಲ್ಲೋಕೇ ಹರೀಶ್ವರ ।**
**ತಾವದ್ರಮಸ್ಯ ಸುಪ್ರೀತೋ ಮದ್ವಾಕ್ಯಮನುಪಾಯನ್ ॥**

"ಪ್ರಪಂಚದಲ್ಲಿ ನನ್ನ ಕಥೆ ಎಲ್ಲಿಯವರೆಗೆ ಪ್ರಚಲಿತವಾಗಿರುವುದೋ, ಅಲ್ಲಿಯವರಗೆ ನೀನು ಆನಂದದಿಂದ ಈ ಪೃಥ್ವಿಯಲ್ಲಿ ಸಂಚರಿಸುತ್ತಿರು."

ಆದ್ದರಿಂದಲೇ ಈ ಶ್ಲೋಕ ಹೀಗೆ ಹೇಳುತ್ತದೆ:

**ಯತ್ರ ಯತ್ರ ರಘುನಾಥ ಕೀರ್ತನಂ ।**
**ತತ್ರ ತತ್ರ ಕೃತಮಸ್ತಕಾಂಜಲಿಂ ।**
**ಬಾಷ್ಪವಾರಿ ಪರಿಪೂರ್ಣಲೋಚನಂ**
**ಮಾರುತಿಂ ನಮತ ರಾಕ್ಷಸಾಂತಕಂ ॥**

"ಶ್ರೀರಾಮನಾಮ ಸಂಕೀರ್ತನೆ ನಡೆಯುವಲ್ಲೆಲ್ಲ ಕಣ್ಣುಗಳಲ್ಲಿ ನೀರುತುಂಬಿಕೊಂಡು, ಕೈಜೋಡಿಸಿಕೊಂಡು ಹನುಮಂತನು ನಿಂತಿರುತ್ತಾನೆ. ರಾಕ್ಷಸರಿಗೆ ಯಮನ ರೂಪದಲ್ಲಿರುವ ಅಂತಹ ಮಾರುತಿಗೆ ನಮಸ್ಕಾರ ಮಾಡೋಣ."

ಪ್ರತಿವರ್ಷ ಶ್ರಾವಣ ಮಾಸದ ಪೂರ್ಣಿಮೆಯ ದಿವಸ ಅಯೋಧ್ಯೆಯಲ್ಲಿ ಶ್ರೀರಾಮದೇವರ ಉಯ್ಯಾಲೋತ್ಸವ ನಡೆಯುತ್ತದೆ. ಅದನ್ನು ನೋಡಲು ೧೯೧೪ನೆ ಇಸವಿ ಶ್ರಾವಣ ಮಾಸದಲ್ಲಿ, ಪೂಜ್ಯ ಸ್ವಾಮಿ ಬ್ರಹ್ಮಾನಂದಜಿ ಮಹಾರಾಜರು ತಮ್ಮ ತಂಡದವರೊಡನೆ ಕಾಶಿಯಿಂದ ಆಯೋಧ್ಯೆಗೆ ತೆರಳಿದರು.

ಅಲ್ಲಿನ ಹನುಮಾನ್ ಗಢೀ ಮಂದಿರದಲ್ಲಿದ್ದ ಆಂಜನೇಯ ಸ್ವಾಮಿಯ ಸನ್ನಿಧಿಯಲ್ಲಿ, ರಾಮನಾಮ ಸಂಕೀರ್ತನೆಯನ್ನು ನಡೆಸುವ ಇಚ್ಛೆ ಪೂಜ್ಯ ಸ್ವಾಮೀಜಿಯವರಿಗೆ ಉಂಟಾಯಿತು. ಅವರ ಇಚ್ಛೆಯ ಪ್ರಕಾರ, ಅವರ ಜೊತೆಯಲ್ಲಿ ಸಾಧುಬ್ರಹ್ಮಚಾರಿಗಳು ಕೂಡಿಕೊಂಡು ಸಂಕೀರ್ತನೆಯನ್ನು ಪ್ರಾರಂಭಿಸಿದರು. ಸಂಕೀರ್ತನೆಯನ್ನು ಕೇಳುತ್ತ, ಕೇಳುತ್ತ ಪೂಜ್ಯ ಸ್ವಾಮಿ ಬ್ರಹ್ಮಾನಂದಜಿ ಮಹಾರಾಜರು ಗಾಢವಾದ ಸಮಾಧಿಸ್ಥಿತಿಗೆ ಏರಿಬಿಟ್ಟರು. ಈ ತನ್ಮಯತೆಯ ಫಲಸ್ವರೂಪವಾಗಿ ಜೊತೆಯಲ್ಲಿ ಬಂದಿದ್ದವರಿಗೆಲ್ಲರಿಗೂ ಅಭೂತಪೂರ್ವವಾದ ಆನಂದದ ಅನುಭೂತಿ ಉಂಟಾಯಿತು. ಅಲ್ಲಿ ಐದು ದಿನಗಳ ಕಾಲ ತಂಗಿದ್ದು, ಪೂಜ್ಯ ಸ್ವಾಮೀಜಿಯವರು ಮತ್ತು ಅವರ ತಂಡದವರು ವಾರಾಣಸಿಗೆ ಹಿಂತಿರುಗಿದರು.

ಪೂಜ್ಯ ಸ್ವಾಮಿ ಬ್ರಹ್ಮಾನಂದಜಿ ಮಹಾರಾಜರು ತಾವು ಧರ್ಮಪ್ರಚಾರಕ್ಕೆ ಎಲ್ಲಿಗೆ ಹೋದರೂ, ಅಲ್ಲಿ ರಾಮನಾಮ ಸಂಕೀರ್ತನೆಯನ್ನು ತಪ್ಪದೆ ಏರ್ಪಡಿಸುತ್ತಿದ್ದರು. ಒಮ್ಮೆ ಪೂರ್ವ ಬಂಗಾಳದ ಭಕ್ತರ ಒತ್ತಾಯದ ಮೇರೆಗೆ ಸ್ವಾಮಿ ಪ್ರೇಮಾನಂದಜಿ ಹಾಗೂ ಇನ್ನಿತರ ಸಾಧುಗಳೊಡನೆ ೧೯೧೬ರ ಜನವರಿ ೧೦ನೆಯ ತಾರೀಖಿನಂದು ಮೆಮನ್‌ಸಿಂಗ್ ಎನ್ನುವ ಊರಿಗೆ ಹೋದರು. ಮಾರನೆಯ ದಿವಸ ಅಲ್ಲಿನ ದುರ್ಗಾ ಮಂದಿರದಲ್ಲಿ ಒಂದು ಧಾರ್ಮಿಕ ಸಭೆ ನಡೆಯಿತು. ಭಕ್ತರು ಪೂಜ್ಯ ಬ್ರಹ್ಮಾನಂದಜಿಯವರನ್ನು ಅನುಗ್ರಹ ಭಾಷಣ ಮಾಡುವಂತೆ ಕೇಳಿಕೊಂಡರು. ಆದರೆ ಸ್ವಾಮೀಜಿಯವರು ಮಾತನಾಡಲಿಲ್ಲ. ಬೇರೆಯವರಿಗೆ ಭಾಷಣ ಮಾಡಲೂ ಅವಕಾಶವನ್ನು ನೀಡಲಿಲ್ಲ. ಅದಕ್ಕೆ ಬದಲಾಗಿ ಆ ಸಂದರ್ಭದಲ್ಲಿ, ರಾಮನಾಮ ಸಂಕೀರ್ತನೆ ನಡೆಸುವಂತೆ ಆದೇಶವಿತ್ತರು.

(ಮುಂದುವರೆಯುವುದು)

**ನಾನ್ಯಾ ಸ್ಪೃಹಾ ರಘುಪತೇ ಹೃದಯೇಽಸ್ಮದೀಯೇ**
**ಸತ್ಯಂ ವದಾಮಿ ಚ ಭವಾನ್ ಅಖಿಲಾಂತರಾತ್ಮಾ ।**
**ಭಕ್ತಿಂ ಪ್ರಯಚ್ಛ ರಘುಪುಂಗವ ನಿರ್ಭರಾಂ ಮೇ**
**ಕಾಮಾದಿದೋಷರಹಿತಂ ಕುರು ಮಾನಸಂ ಚ ॥**

"ರಘುಕುಲಪತಿಯೂ ಸರ್ವಾಂತರ್ಯಾಮಿಯೂ ಆದ ಪ್ರಭುವೇ, ನಿನಗೆ ಸತ್ಯವನ್ನೇ ಹೇಳುತ್ತೇನೆ. ನನ್ನ ಹೃದಯದಲ್ಲಿ ಬೇರೆ ಆಸೆಯಿಲ್ಲ. ಉಜ್ವಲಭಕ್ತಿಯನ್ನು ಮಾತ್ರ ನನಗೆ ಕರುಣಿಸು ಮತ್ತು ಮನಸ್ಸನ್ನು ಕಾಮಾದಿ ದೋಷರಹಿತವನ್ನಾಗಿ ಮಾಡು."